ನಡುವೆ ಸಾಕಷ್ಟು ಭಿನ್ನತೆಗಳಿವೆ. ಸುಮಾರು ಎರಡು ಸಾವಿರ ಕಿಲೋಮೀಟರ್ ಅಂತರವನ್ನು ಹೊಂದಿರುವ ಈ ಎರಡು ರಾಜ್ಯಗಳ ಸಾಂಸ್ಕೃತಿಕ ವಾತಾವರಣದಲ್ಲಿ ವೈವಿಧ್ಯ ಹಾಗೂ ವೈರುಧ್ಯ ಇರುವುದು ಸಹಜವೂ ಹೌದು. ಆದರೆ ಇವೆರಡೂ ರಾಜ್ಯಗಳು ಸಾಹಿತ್ಯ, ಸಂಗೀತ, ಕಲೆ, ಚಲನಚಿತ್ರ ಇತ್ಯಾದಿ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆ ಇತರ ರಾಜ್ಯಗಳಿಗೆ ಮಾದರಿ. ತಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿರದೇ ಜಾಗತಿಕ ಮಟ್ಟದಲ್ಲಿ ಮಾನ್ಯತೆ ಹಾಗೂ ಜನಪ್ರಿಯತೆ ಗಳಿಸಿರುವ ಬಂಗಾಳಿಗಳು ಹಾಗೂ ಕನ್ನಡಿಗರ ಸಾಧನೆಯೇ ಇದಕ್ಕೆ ಸಾಕ್ಷಿ.

**◆ ತಮಗೆ ಈಗ 89ರ ಹರೆಯ. ಈಗಲೂ ಗಂಟೆಗಟ್ಟಲೆ ನಿಂತುಕೊಂಡೇ ಮಾತನಾಡುತ್ತೀರಿ. ಕುಪ್ಪಳಿಯಲ್ಲಿ ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ ಆಡಿದ ಮಾತುಗಳಲ್ಲಿನ ಸ್ಪಷ್ಟತೆ ಕಂಡು ಹಲವರು ಚಕಿತರಾಗಿದ್ದಾರೆ. ದೂರದ ಪ್ರಯಾಣವನ್ನೂ ನೀವು ಅತ್ಯಂತ ಪ್ರೀತಿಯಿಂದ ಮಾಡುತ್ತೀರಿ. ಒಮ್ಮೆ ಪರಿಚಯವಾದವರನ್ನು ತುಂಬಾ ವರ್ಷಗಳ ಕಾಲ ನೆನಪಿನಲ್ಲಿಟ್ಟುಕೊಳ್ಳುವಿರಿ. ಇವೆಲ್ಲದರ ಹಿಂದಿನ ರಹಸ್ಯವೇನು?**

ಇದರಲ್ಲಿ ಗುಟ್ಟಿನ ವಿಷಯವೇನೂ ಇಲ್ಲ. ನನ್ನ ತಲೆಮಾರಿನವರು ತಮ್ಮ ಆರೋಗ್ಯದ ಬಗ್ಗೆ ವಿಶೇಷ ಗಮನವನ್ನು ಕೊಡುತ್ತಾರೆ; ಹಾಗಾಗಿ ಹೆಚ್ಚು ಕಾಲ ಬದುಕುತ್ತಾರೆ. ಇದು ಇಂದಿನ ತಲೆಮಾರಿನವರಿಗೆ ಆಶ್ಚರ್ಯ ಹುಟ್ಟಿಸಬಹುದು. ಏಕೆಂದರೆ ಇದು 'ಇನ್‌ಸ್ಟಂಟ್ ಯುಗ.' ಎಲ್ಲದರಲ್ಲಿಯೂ ಆತುರ, ನಿರ್ಲಕ್ಷ್ಯ ಧೋರಣೆ ಮತ್ತು ಅಜಾಗರೂಕತೆ. ಉತ್ತಮ ಆಹಾರ ಸೇವನೆ ಮಾಡಿದರೆ ಸಾಲದು; ನಮ್ಮ ಚಿಂತನೆಯೂ ಉತ್ತಮವಾಗಿರಬೇಕು; ಒತ್ತಡರಹಿತವಾಗಿ ಬದುಕುವುದನ್ನು ರೂಢಿಸಿಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ದೇಹಕ್ಕೆ ಹೆಚ್ಚಿನ ವಿಶ್ರಾಂತಿ ನೀಡಬಾರದು. 'ನನಗೆ ವಯಸ್ಸಾಗುತ್ತಿದೆ, ನಾನು ವೃದ್ಧನಾಗುತ್ತಿದ್ದೇನೆ' ಇತ್ಯಾದಿ ವಿಷಯಗಳ ಕಡೆಗೆ ನಾನು ಗಮನ ಕೊಡುವುದಿಲ್ಲ. ನನ್ನನ್ನು ನಾನು 'ಯುವಕ' ಎಂದೇ ಭಾವಿಸುತ್ತೇನೆ. ಈಗಲೂ ಪುಟ್ಟ ಮಕ್ಕಳ ಜೊತೆಯಲ್ಲಿ ಸಮಯ ಕಳೆಯುತ್ತೇನೆ, ಆಟವಾಡುತ್ತೇನೆ. ಮನಸ್ಸು ನೆಮ್ಮದಿಯಾಗಿದ್ದರೆ ವಯಸ್ಸು ಲೆಕ್ಕಕ್ಕೇ ಬರುವುದಿಲ್ಲ.

**◆ ನಿಮ್ಮ ಸುದೀರ್ಘ ಜೀವನಯಾತ್ರೆಯ ಕಡೆಗೆ ಹಿಂದಿರುಗಿ ನೋಡಿದಾಗ ಏನನ್ನಿಸುತ್ತದೆ? ಜೀವನದಲ್ಲಿನ ಯಾವ ಘಟನೆ ತುಂಬಾ ಕಾಡುತ್ತದೆ?**

ವಾಸ್ತವದಲ್ಲಿ ನಾನು ಅತ್ಯಂತ ಸರಳವಾದ ಜೀವನವನ್ನು ಸಾಗಿಸುತ್ತ ಬಂದಿರುವವನು. ನನ್ನ ಜೀವನದಲ್ಲಿ ನಾಟಕವೂ ಇಲ್ಲ, ಗಮನೀಯ ಎನ್ನಬಹುದಾದ ಏರಿಳಿತವೂ ಇಲ್ಲ. ನನ್ನೊಳಗಿನ ಒಂದು ವಿಶೇಷವಾದ 'ಶಕ್ತಿ' ನನ್ನನ್ನು ಇಲ್ಲಿಯವರೆಗೆ ಕರೆದುಕೊಂಡು ಬಂದಿದೆ. ಆ ಶಕ್ತಿಯನ್ನು ನಾನು 'ಪ್ರೀತಿ' ಎಂದು ಭಾವಿಸಿದ್ದೇನೆ. ಕೆಲವೊಮ್ಮೆ ಇದೇ ಪ್ರೀತಿ ನನಗೆ ವೇದನೆಯನ್ನು ನೀಡಿದ ಉದಾಹರಣೆಯೂ ಇದೆ. ಇದು ಇಲ್ಲದಿದ್ದರೆ ಜೀವನ ನಡೆಯುವುದಾದರೂ ಹೇಗೆ ಸಾಧ್ಯ? ಪ್ರೀತಿಯನ್ನು ಸಂಭಾಳಿಸಿಕೊಂಡು ಹೋಗುವುದರಲ್ಲಿಯೇ ಜೀವನದ ವಿವಿಧ ಘಟ್ಟಗಳು ಕಳೆದುಹೋಗುತ್ತವೆ. ನನ್ನ ತಂದೆಯವರು ಸಾವನ್ನಪ್ಪಿದ ಸಂದರ್ಭದಲ್ಲಿ ನಾನು ಅವರ ಬಳಿ ಇರಲಿಲ್ಲ; ಬೇರೆ ಊರಿನಲ್ಲಿದ್ದೆ. ವಿಷಯ ತಿಳಿಯುತ್ತಿದ್ದಂತೆಯೇ ಗಾಬರಿಗೊಂಡೆ; ಆತುರಾತುರದಿಂದ ಊರಿಗೆ ಬಂದೆ. ಆ ಸಮಯದಲ್ಲಿ ನನ್ನ ತಂದೆಯವರ ಶವವನ್ನು ಸ್ಮಶಾನದಲ್ಲಿ ಮಲಗಿಸಲಾಗಿತ್ತು. ಚಿತೆಯು ಸಿದ್ಧಗೊಂಡಿತ್ತು, ಅವರನ್ನು ಆಹುತಿ ತೆಗೆದುಕೊಳ್ಳುವುದಕ್ಕೆ. ತಂದೆಯವರ ಕೆನ್ನೆಗೊಂದು ಮುತ್ತು ಕೊಟ್ಟು, ಜೋರಾಗಿ ಬಿಕ್ಕಳಿಸುತ್ತ ಹೇಳಿದ್ದೆ, 'ಬಾಬಾ, ನಾನು ನಿನ್ನನ್ನು ಅದೆಷ್ಟು ಪ್ರೀತಿಸುತ್ತಿದ್ದೆ... ಯಾವತ್ತಾದರೂ ನಿನಗೆ ಇದರ ಅನುಭವವಾಗಿತ್ತೇನು?' ನನ್ನ ತಂದೆಯವರು ತುಂಬಾ ಕಟ್ಟುನಿಟ್ಟಿನ, ಶಿಸ್ತಿನ ಮನುಷ್ಯರು. ಮಾತನಾಡುತ್ತಿದ್ದುದು ತುಂಬಾ ಕಡಿಮೆ. ಗಂಭೀರ ವದನ. ಎಷ್ಟೋ ಬಾರಿ ಅವರ ಬಳಿಗೆ ಹೋಗಿ, 'ಅಪ್ಪಾ, ನನಗೆ ನೀನು ತುಂಬಾ ಇಷ್ಟ' ಎಂದು ಹೇಳಬೇಕು ಅಂದುಕೊಳ್ಳುತ್ತಿದ್ದೆ. ಆದರೆ ಸಾಧ್ಯವಾಗುತ್ತಿರಲಿಲ್ಲ. ಧೈರ್ಯ ಬರುತ್ತಿರಲಿಲ್ಲ. ಅವರೂ ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು. ಆದರೆ ಪ್ರೀತಿಯನ್ನು ಶಬ್ದಗಳಿಂದಲೇ ವ್ಯಕ್ತಪಡಿಸಬೇಕು ಎಂದೇನೂ ಇಲ್ಲವಲ್ಲ. ಆದರೂ ಅವರು ಸಾವನ್ನಪ್ಪಿದಾಗ ನನ್ನೊಳಗೆ ಎಲ್ಲವನ್ನೂ ಕಳೆದುಕೊಂಡ ಅನುಭವ.

**◆ ನಿಮ್ಮ ಮಾತುಗಳಲ್ಲಿ ಆಗಾಗ ಆಧ್ಯಾತ್ಮಿಕ ವಿಷಯಗಳು ಇಣುಕುತ್ತವೆ. ಇದರ ಬಗೆಗಿನ ಒಲವು**